# ಬತ್ತಕ್ಕೆ ಬೆಂಬಲ ಬೆಲೆ; ಸರ್ಕಾರಕ್ಕೆ ಅಧ್ಯಯನ ವರದಿ

## ಬೆಲೆ ಸ್ಥಿರತೆ ಕಾಪಾಡುವ ಸಭೆಯಲ್ಲಿ ಆಯೋಗ ಅಧ್ಯಕ್ಷ ಪ್ರಕಾಶ್ ಕಮ್ಮರಡಿ | ಜಿಲ್ಲೆಯಲ್ಲಿ 11,725 ಹೆಕ್ಟೇರ್ ಬತ್ತ ಬೆಳೆ ಕಡಿಮೆ

**ಕನ್ನಡಪ್ರಭ ವಾರ್ತೆ ಶಿವಮೊಗ್ಗ**

ಬತ್ತ, ರಾಗಿ, ಜೋಳ ಸೇರಿ ಆಹಾರ ಬೆಳೆಗಳನ್ನು ಉಳಿಸಿಕೊಳ್ಳಬೇಕಾದ ತುರ್ತು ಅಗತ್ಯವಿದೆ. ವಾಣಿಜ್ಯ ಬೆಳೆಗಳಿಗೆ ಈಗ ಹೆಚ್ಚು ಆದ್ಯತೆ ಸಿಗುತ್ತಿದೆ ಎಂದು ಕೃಷಿ ಬೆಲೆ ಆಯೋಗ ಅಧ್ಯಕ್ಷ ಪ್ರಕಾಶ್ ಕಮ್ಮರಡಿ ಹೇಳಿದರು. ನಗರದ ಎಪಿಎಂಸಿ ಆವರಣದಲ್ಲಿ ಬುಧವಾರ ಬತ್ತದ ಬೆಲೆ ಸ್ಥಿರತೆ ಕಾಪಾಡುವ ಕುರಿತ ರೈತರ ಸಭೆಯಲ್ಲಿ ಅವರು ಮಾತನಾಡಿ, ಇದೇ ರೀತಿ ಮುಂದುವರಿದರೆ ಆಹಾರ ಭದ್ರತೆಗೆ ಮುಂದಿನ ದಿನಗಳಲ್ಲಿ ಪೆಟ್ಟು ಬೀಳಲಿದೆ ಎಂದು ಹೇಳಿದರು.

ಬತ್ತದ ಬೆಳೆ ಉಳಿಸಿಕೊಳ್ಳಬೇಕಾದ ಅನಿವಾರ್ಯತೆ ಉಂಟಾಗಿದೆ. ಸರ್ಕಾರಗಳು ಬತ್ತ, ರಾಗಿ, ಜೋಳಕ್ಕೆ ಬೆಂಬಲ ಬೆಲೆ ಘೋಷಿಸುವ ಮೂಲಕ ಪ್ರೋತ್ಸಾಹಿಸಬೇಕು. ಈ ಹಿನ್ನೆಲೆಯಲ್ಲಿ ರೈತರ ಸಮಸ್ಯೆಗಳು ಬೆಳೆ ಬೆಳೆಯಲು ಇರುವ ತೊಂದರೆ ಸೇರಿ ಸಂಬಂಧಿಸಿದ ಹಲವು ಅಧ್ಯಯನ ಮಾಡಬೇಕಾಗಿದೆ. ಈ ರೀತಿ ಸಮಗ್ರ ಅಧ್ಯಯನ ನಡೆಸಿ ಈ ಬಗ್ಗೆ ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು ಎಂದರು.

ಮಳೆ ಆಶ್ರಿತ ಬತ್ತವನ್ನು ಯಾರೂ ಬೆಳೆಯುತ್ತಿಲ್ಲ. ಉತ್ತರ ಕರ್ನಾಟಕದ ಕಡೆ ರಾಗಿ ಬೆಳೆಯೂ ಇಲ್ಲ, ಜೋಳ ಕೂಡಾ ಇಲ್ಲ. ಅಂಕಿ ಅಂಶದ ಪ್ರಕಾರ ಕಳೆದ 10 ವರ್ಷಗಳಲ್ಲಿ 1.59 ಲಕ್ಷ ಹೆಕ್ಟೇರ್ ಬತ್ತ ಬಿತ್ತನೆ ಕಡಿಮೆಯಾಗಿದೆ. ಪ್ರತಿ ವರ್ಷ 25ರಿಂದ 30 ಸಾವಿರ ಹೆಕ್ಟೇರ್‌ನಷ್ಟು ಬತ್ತ ಕಡಿಮೆಯಾದರೆ, 23 ಸಾವಿರ ಹೆಕ್ಟೇರ್‌ನಷ್ಟು ರಾಗಿ ಬೆಳೆ ಕಡಿಮೆಯಾಗುತ್ತದೆ. 50 ಸಾವಿರ ಹೆಕ್ಟೇರ್‌ನಷ್ಟು ಜೋಳ ಕಡಿಮೆಯಾಗಿದೆ. ಇದು ತುಂಬ ಆತಂಕ ವಿಷಯವಾಗಿದೆ. ಈ ಬೆಳೆಗಳ ಬದಲು ಬೀಟಿ ಹತ್ತಿ, ಮೆಕ್ಕೆಜೋಳ, ಅಡಕೆ, ಕಬ್ಬು ಮುಂತಾದ ಬೆಳೆಗಳು ಹೆಚ್ಚಾಗುತ್ತಿವೆ. ಮೆಕ್ಕೆಜೋಳವಂತೂ ಶೇ.70ಕ್ಕಿಂತ ಹೆಚ್ಚು ಅಧಿಕವಾಗಿದೆ ಎಂದು ಮಾಹಿತಿ ನೀಡಿದರು.

ಶಿವಮೊಗ್ಗ ಜಿಲ್ಲೆಯಲ್ಲಿಯೆ ಸುಮಾರು 11,725 ಹೆಕ್ಟೇರ್‌ನಷ್ಟು ಬತ್ತದ ಬೆಳೆ ಕಡಿಮೆಯಾಗಿದೆ. 1,512 ಎಕರೆಯಷ್ಟು ರಾಗಿ ಬೆಳೆ ಕಡಿಮೆಯಾಗಿದೆ. ಇದರ ಜೊತೆಗೆ 28,813 ಹೆಕ್ಟೇರ್ ಕೃಷಿಯನ್ನು ಬಿಟ್ಟೇ ಹೋಗಿದೆ. ಮೆಕ್ಕೆಜೋಳ ಸುಮಾರು 4 ಲಕ್ಷ ಹೆಕ್ಟೇರ್‌ನಷ್ಟು ಜಾಸ್ತಿಯಾಗಿದೆ ಎಂದು ವಿವರಿಸಿದರು.



### ಅವರೇನಂದ್ರು?

- ಬತ್ತ ಖರೀದಿ ನಂತರ ಸರ್ಕಾರದಿಂದ ಹಣ ಪಾವತಿ ವಿಳಂಬ
- ಬತ್ತ ಮಾರಲು ಬಂದ ರೈತರಿಗೆ ಸ್ಪಂದಿಸಲು ಸಿಬ್ಬಂದಿ ಇರುವುದಿಲ್ಲ
- ರೈತರ ಬತ್ತದ ವಾಹನಗಳು ಅನ್‌ಲೋಡ್ ಆಗಲು ಎರಡು-ಮೂರು ದಿನ ಬೇಕಾಗುತ್ತದೆ

**ಮಧ್ಯವರ್ತಿಗಳಿಗೆ ಅನುಕೂಲವಷ್ಟೇ:**

ಜಿಲ್ಲೆಯಲ್ಲಿ ಬತ್ತಕ್ಕೆ ಬೆಂಬಲ ಬೆಲೆ ಘೋಷಿಸಲಾದರೂ ಇದರಲ್ಲಿ ರೈತರಿಗೆ ಉಪಯೋಗವಾಗುತ್ತಿಲ್ಲ ಎಂದು ಸಭೆಯಲ್ಲಿದ್ದ ಹಲವು ರೈತರು ತಮ್ಮ ಸಮಸ್ಯೆ ತೆರೆದಿಟ್ಟರು. ಸಾಮಾನ್ಯವಾಗಿ ನವೆಂಬರ್ ತಿಂಗಳಲ್ಲಿಯೇ ಬತ್ತ ಕಟಾವಿಗೆ ಬರುತ್ತದೆ. ಆದರೆ ತೇವಾಂಶದ ನೆಪವೊಡ್ಡಿ ಸರ್ಕಾರ ಜನವರಿ ತಿಂಗಳಾದರೂ ಬೆಂಬಲ ಬೆಲೆಯನ್ನು ಬತ್ತ ಕೊಳ್ಳಲು ಮುಂದೆ ಬರುವುದಿಲ್ಲ. ರೈತರು ಬತ್ತವನ್ನು ಮನೆಯಲ್ಲಿ ಇಟ್ಟುಕೊಳ್ಳಲು ಆಗುವುದಿಲ್ಲ. ಸಿಕ್ಕ ಸಿಕ್ಕ ದರಕ್ಕೆ ಮಾರಾಟ ಮಾಡುತ್ತಾರೆ. ಇದರಿಂದ ಮಧ್ಯವರ್ತಿಗಳಿಗೆ ಅನುಕೂಲವಾಗುತ್ತದೆಯೇ ಹೊರತು ಬೇರೇನೂ ಆಗುವುದಿಲ್ಲ ಎಂದು ದೂರಿದರು.

ರೈತ ಮುಖಂಡ ಕೆ.ಟಿ. ಗಂಗಾಧರ್ ಮತ್ತು ಎಚ್.ಆರ್. ಬಸವರಾಜಪ್ಪ ಮಾತನಾಡಿ, ಬತ್ತಕ್ಕೆ ಬೆಂಬಲ ಬೆಲೆ ಘೋಷಿಸುವುದು ಮಾತ್ರವಲ್ಲ ಸರಿಯಾದ ಸಮಯಕ್ಕೆ ಹಣ ಪಾವತಿಯಾಗುವಂತೆ ನೋಡಿಕೊಳ್ಳಬೇಕು ಎಂದು ಒತ್ತಾಯಿಸಿದರು.

ಮೊದಲು ಡಿಸೆಂಬರ್ ತಿಂಗಳಲ್ಲಿಯೇ ಬತ್ತದ ಖರೀದಿ ಆರಂಭಿಸಿ. ರೈತರು ಕಷ್ಟಪಟ್ಟಾದರೂ ಬತ್ತ ಒಣಗಿಸಿ ತೇವಾಂಶ ಇಲ್ಲದೇ ಕೊಡುತ್ತಾರೆ. ಇಲ್ಲದಿದ್ದರೆ ನಿಮ್ಮ ಯೋಜನೆಯೇ ವಿಫಲವಾಗುತ್ತದೆ. ಖಾಲಿ ಚೀಲದ ಸಮಸ್ಯೆ ಮೊದಲು ಬಗೆಹರಿಸಿ. ಈಗಿರುವ ₹1,510 ಬೆಂಬಲ ಬೆಲೆ ಹೆಚ್ಚಿಸಿ ಎಂದು ಸಲಹೆ ನೀಡಿದರು.

ಉಗ್ರಾಣ ನಿಗಮದ ಪ್ರಾದೇಶಿಕ ವ್ಯವಸ್ಥಾಪಕ ಭಾಗವತ್ ಮಾತನಾಡಿ, ಜಿಲ್ಲೆಯಲ್ಲಿ 2015-16ರಲ್ಲಿ ಸುಮಾರು 11 ಕೇಂದ್ರಗಳಲ್ಲಿ ಬತ್ತವನ್ನು ಖರೀದಿಸಲಾಗಿದೆ. 3.54 ಲಕ್ಷ ಕ್ವಿಂಟಲ್ ಬತ್ತ ಖರೀದಿ ಮಾಡಲಾಗಿದ್ದು, ಸುಮಾರು 5041 ರೈತರಿದ್ದಾರೆ. ₹53.54 ಕೋಟಿ ಹಣ ನೀಡಲಾಗಿದೆ ಎಂದರು. ಅಪರ ಜಿಲ್ಲಾಧಿಕಾರಿ ಚನ್ನಬಸಪ್ಪ, ಆಹಾರ ಇಲಾಖೆ ಅಧಿಕಾರಿ ಶ್ರೀಧರ್, ವರ್ತಕರ ಸಂಘದ ಅಧ್ಯಕ್ಷ ಮಂಜುನಾಥ್, ಎಪಿಎಂಸಿ ಅಧಿಕಾರಿ ವಿಜಯಲಕ್ಷ್ಮಿ, ಕೃಷಿ ಇಲಾಖೆ ಅಧಿಕಾರಿ ಮಧುಸೂದನ್ ರೈತರು ಇದ್ದರು.

# ಬೆಳೆ ಕ್ಷೇತ್ರ ಸಂಕುಚಿತ; ಆಹಾರ ಭದ್ರತೆಗೆ ಪೆಟ್ಟು: ಕಮ್ಮರಡಿ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಭತ್ತ, ರಾಗಿ, ಜೋಳ ಸೇರಿದಂತೆ ಆಹಾರ ಬೆಳೆ ಕ್ಷೇತ್ರ ಕಳೆದ ಹತ್ತು ವರ್ಷಗಳಲ್ಲಿ ಗಣನೀಯವಾಗಿ ಕಡಿಮೆಯಾಗಿದ್ದು, ಭವಿಷ್ಯದಲ್ಲಿ ದೇಶದ ಆಹಾರ ಭದ್ರತೆಗೆ ದೊಡ್ಡ ಪೆಟ್ಟು ಬೀಳಲಿದೆ ಎಂದು ಕೃಷಿ ಬೆಲೆ ಆಯೋಗದ ಅಧ್ಯಕ್ಷ ಪ್ರಕಾಶ್ ಕಮ್ಮರಡಿ ಎಚ್ಚರಿಸಿದರು.

ನಗರದ ಎಪಿಎಂಸಿ ಆವರಣದಲ್ಲಿ ಬುಧವಾರ ಭತ್ತದ ಬೆಲೆ ಸ್ಥಿರತೆ ಕಾಪಾಡುವ ಕುರಿತು ರೈತರ ಜತೆಗಿನ ಸಂವಾದ ಸಭೆಯಲ್ಲಿ ಅವರು ಮಾತನಾಡಿದರು.

ಪ್ರತಿ ವರ್ಷವೂ 25ರಿಂದ 30 ಸಾವಿರ ಹೆಕ್ಟೇರ್ ಭತ್ತ ಬೆಳೆಯುವ ಕ್ಷೇತ್ರ ಕಡಿಮೆಯಾಗುತ್ತಿದೆ. ಕಳೆದ 10 ವರ್ಷಗಳಲ್ಲಿ 1.59 ಲಕ್ಷ ಹೆಕ್ಟೇರ್ ಕಡಿಮೆಯಾಗಿದೆ. ಹಾಗೆಯೇ 23 ಸಾವಿರ ಹೆಕ್ಟೇರ್ ರಾಗಿ, 50 ಸಾವಿರ ಹೆಕ್ಟೇರ್ ಜೋಳ ಕಡಿಮೆಯಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಶೇ 70ರಷ್ಟು ಪ್ರದೇಶ ಅಡಿಕೆ, ಮೆಕ್ಕೆಜೋಳ ಆಕ್ರಮಿಸಿಕೊಂಡಿದೆ. ಆಹಾರ ಧಾನ್ಯಗಳ ಬೆಳೆ ತೀವ್ರ ಕುಸಿಯುತ್ತಿದೆ. ಮಳೆ ಆಶ್ರಿತ ಭತ್ತ ಯಾರೂ



**ಶಿವಮೊಗ್ಗ ಜಿಲ್ಲೆಯಲ್ಲಿ ಸುಮಾರು 11,725 ಹೆಕ್ಟೇರ್ ಭತ್ತದ ಕ್ಷೇತ್ರ ಕಡಿಮೆಯಾಗಿದೆ. 28,813 ಹೆಕ್ಟೇರ್‌ನಲ್ಲಿ ಬೆಳೆಯನ್ನೇ ಬೆಳೆಯುತ್ತಿಲ್ಲ.**
**–ಪ್ರಕಾಶ್ ಕಮ್ಮರಡಿ,**
ಕೃಷಿ ಬೆಲೆ ಆಯೋಗದ ಅಧ್ಯಕ್ಷ

ಬೆಳೆಯುತ್ತಿಲ್ಲ. ಉತ್ತರ ಕರ್ನಾಟಕದಲ್ಲಿ ಹೇರಳವಾಗಿ ಬೆಳೆಯುತ್ತಿದ್ದ ರಾಗಿ, ಜೋಳಕ್ಕೂ ಕುತ್ತು ಬಂದಿದೆ ಎಂದರು.

ಸರ್ಕಾರ ಭತ್ತ, ರಾಗಿ, ಜೋಳಕ್ಕೆ ಬೆಂಬಲ ಬೆಲೆ ಘೋಷಿಸಬೇಕು. ರೈತರ ಸಮಸ್ಯೆಗಳು, ಬೆಳೆ ಬೆಳೆಯಲು ಇರುವ ತೊಂದರೆಗಳ ವೈಜ್ಞಾನಿಕ ಅಧ್ಯಯನ ನಡೆಸಿ ಸರ್ಕಾರಕ್ಕೆ ಸಮಗ್ರ ವರದಿ ಸಲ್ಲಿಸಲಾಗುವುದು ಎಂದು ಮಾಹಿತಿ ನೀಡಿದರು.

ಭತ್ತಕ್ಕೆ ಬೆಂಬಲ ಬೆಲೆ ಘೋಷಿಸುವ ಜತೆಗೆ, ಸಮಯಕ್ಕೆ ಹಣ ಪಾವತಿಯಾಗುವಂತೆ ನೋಡಿಕೊಳ್ಳಬೇಕು. ಡಿಸೆಂಬರ್‌ನಲ್ಲೇ ಬೆಂಬಲ ಬೆಲೆ ಖರೀದಿ ಕೇಂದ್ರ ತೆರೆಯಬೇಕು. ಇಲ್ಲದಿದ್ದರೆ ಯೋಜನೆಯೇ ವಿಫಲವಾಗುತ್ತದೆ. ಖಾಲಿ ಚೀಲದ ಸಮಸ್ಯೆ ಮೊದಲು ಬಗೆಹರಿಸಬೇಕು. ಈಗಿರುವ ಬೆಂಬಲ ಬೆಲೆ ಹೆಚ್ಚಿಸಬೇಕು ಎಂದು ರೈತ ಮುಖಂಡರಾದ ಕೆ.ಟಿ.ಗಂಗಾಧರ್, ಎಚ್.ಆರ್. ಬಸವರಾಜಪ್ಪ ಮತ್ತಿತರರು ಸಲಹೆ ನೀಡಿದರು.

ಉಗ್ರಾಣ ನಿಗಮದ ಪ್ರಾದೇಶಿಕ ವ್ಯವಸ್ಥಾಪಕ ಭಾಗವತ್ ಮಾತನಾಡಿ, 'ಜಿಲ್ಲೆಯಲ್ಲಿ 2015--16ನೇ ಸಾಲಿನಲ್ಲಿ ಸುಮಾರು 11 ಕೇಂದ್ರಗಳಲ್ಲಿ ಭತ್ತ ಖರೀದಿಸಲಾಗಿದೆ. 3.54 ಲಕ್ಷ ಕ್ವಿಂಟಲ್ ಭತ್ತ ಖರೀದಿ ಮಾಡಲಾಗಿತ್ತು. 5,041 ರೈತರಿಗೆ ₹ 53.54 ಕೋಟಿ ನೀಡಲಾಗಿದೆ' ಎಂದರು.

ಹೆಚ್ಚುವರಿ ಜಿಲ್ಲಾಧಿಕಾರಿ ಚನ್ನಬಸಪ್ಪ, ಆಹಾರ ಇಲಾಖೆ ಅಧಿಕಾರಿ ಶ್ರೀಧರ್, ವರ್ತಕರ ಸಂಘದ ಅಧ್ಯಕ್ಷ ಮಂಜುನಾಥ್, ಎಪಿಎಂಸಿ ಅಧಿಕಾರಿ ವಿಜಯಲಕ್ಷ್ಮಿ, ಜಂಟಿ ಕೃಷಿ ನಿರ್ದೇಶಕ ಮಧುಸೂದನ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.